**ಅಸಲು ದಾವಾ ನಂ. 344/21**

**ಡಿ ಡಬ್ಲ್ಯೂ :1**

ಸಾಕ್ಷಿಯನ್ನು ದಿನಾಂಕಃ  01-09-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿ 3 ರಿಂದ 6 ರವರ  ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ನಾನು ಮತ್ತು 1ನೇ ಪ್ರತಿವಾದಿ ಈ ಪ್ರಕರಣದಲ್ಲಿ ಒಬ್ಬರೇ ವಕೀಲರನ್ನು ನೇಮಿಸಿಕೊಂಡು ತಕರಾರನ್ನು ಸಲ್ಲಿಸಿರುತ್ತೇವೆ. ವಾದಿಗಳು ಸಲ್ಲಿಸಿರುವ ಈ ಪ್ರಕರಣಕ್ಕೆ ನಾನು ತಕರಾರು ಸಲ್ಲಿಸಿದ್ದು ನನ್ನ ತಕರಾರಿನಲ್ಲಿ ನನಗೂ ಭಾಗದ ಹಕ್ಕು ಇರುತ್ತದೆ ಎಂದು ಹೇಳಿರುತ್ತೇನೆ. ದಾವಾ ಆಸ್ತಿಗಳು ನನ್ನ ತಂದೆ ಮೃತಪಡುವುದಕ್ಕೂ ಪೂರ್ವದಲ್ಲಿ ನನ್ನ ತಂದೆಯೇ ಒಟ್ಟು ಕುಟುಂಬದ ಯಜಮಾನರಾಗಿದ್ದರು ಎಂದರೆ ಸರಿ .  ವಾದಿಗಳು ಈ ದಾವೆಯನ್ನು ಸರ್ವೆ ನಂಃ 62 ರಲ್ಲಿನ ಜಮೀನುಗಳ ವಿಚಾರವಾಗಿ ದಾಖಲು ಮಾಡಿರುತ್ತಾರೆ. ವಾದಿಗಳು ಸಲ್ಲಿಸಿರುವ ವಾದ ಪತ್ರದಲ್ಲಿರುವ ಆಸ್ತಿಗಳ ಪೈಕಿ ಈಗ 6ನೇ ದಾವಾ ಆಸ್ತಿ ಮಾತ್ರ ಉಳಿದಿರುತ್ತದೆ. ದಾವಾ ಆಸ್ತಿಯ ಸ್ವತ್ತಿನ ಸಂಃ 1 ರಿಂದ 5 ಈಗ ಮಾರಾಟವಾಗಿರುತ್ತವೆ ಎಂದರೆ ಸರಿ .

2. ನನ್ನ ತಂದೆಯವರು 2007 ನೇ ಇಸವಿಯಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮರಣ ಹೊಂದುವ ಕಾಲಕ್ಕೆ ಸರ್ವೆ ನಂಃ 62/3 ರ ಸ್ವತ್ತನ್ನು ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳನ್ನು ನನ್ನ ತಂದೆಯೇ  ಮಾರಾಟ ಮಾಡಿದ್ದರು ಎಂದರೆ ಸರಿ . ನನ್ನ ತಂದೆ ಮೃತಪಟ್ಟ ನಂತರ ನನ್ನ ಕುಟುಂಬದ ಯಜಮಾನಿಕೆ ಮತ್ತು ವ್ಯವಹಾರವನ್ನು 1ನೇ ಪ್ರತಿವಾದಿಯಾದ ನನ್ನ ತಾಯಿ ನೋಡಿಕೊಳ್ಳುತ್ತಿದ್ದರು. ದಾವಾ ಸ್ವತ್ತಿನ ಪೈಕಿ ಐಟಂ ನಂಃ  2 ರ ಸರ್ವೆ ನಂಃ 62/3 ರ ಸ್ವತ್ತನ್ನು ನನ್ನ ತಾಯಿ ಒಟ್ಟು ಕುಟುಂಬದ ಯಜಮಾನಿಯಾಗಿ 4ನೇ ಪ್ರತಿವಾದಿಗೆ 2007 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ 2ನೇ ಸ್ವತ್ತಿನಲ್ಲಿ 4ನೇ ಪ್ರತಿವಾದಿಯು ಸ್ವಾಧೀನಾನುಭವವನ್ನು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ .

3. ದಾವಾ ಆಸ್ತಿಯ 1ನೇ ಸ್ವತ್ತಾದ ಸರ್ವೆ ನಂಃ 62/2 ರ 1 ಎಕರೆ ಜಮೀನನ್ನು 3ನೇ ಪ್ರತಿವಾದಿ ವ್ಯವಸಾಯ ಮಾಡಿಕೊಂಡು ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ನನಗೆ

ಗೊತ್ತಿಲ್ಲ. ದಾವಾ ಆಸ್ತಿಯ 3ನೇ ಸ್ವತ್ತಾದ ಸರ್ವೆ ನಂಃ 62/4 ರ 1 ಎಕರೆ ಜಮೀನಿನಲ್ಲಿ 5 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ 5ನೇ ಸ್ವತ್ತಾದ ಸರ್ವೆ ನಂಃ 62/6 ರ 2 ಎಕರೆ ಜಮೀನಿನಲ್ಲಿ ಯಾರು ಸ್ವಾಧೀನಾನುಭವದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ ಮತ್ತು ನಾವು ಸಹ ಸ್ವಾಧೀನದಲ್ಲಿ ಇರುವುದಿಲ್ಲ. ದಾವಾ ಆಸ್ತಿಯ 5ನೇ ಸ್ವತ್ತನ್ನು 6ನೇ ಪ್ರತಿವಾದಿ ನನ್ನ ತಂದೆಯಿಂದ ಖರೀದಿ ಮಾಡಿದಾಗಿನಿಂದಲೂ ಸ್ವಾಧೀನಾನುಭದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ದಾವಾ ಆಸ್ತಿಯ 1 ರಿಂದ 5 ನೇ ಸ್ವತ್ತು ನನಗೆ ಬುದ್ಧಿ ಬಂದಾಗಿನಿಂದಲೂ ನಮ್ಮ ಕುಟುಂಬದ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಗೌರವಯುತ ವ್ಯಕ್ತಿಯಾಗಿದ್ದರು ಎಂದರೆ ಸರಿ . ನನ್ನ ತಂದೆಗೆ ಯಾವುದೇ ದುಶ್ಚಟಗಳು ಇರುವುದಿಲ್ಲ ಎಂದರೆ ಮದ್ಯಪಾನ ಮಾಡುತ್ತಿದ್ದರು. ವಾದಿಗಳು ನ್ಯಾಯಾಲಯಕ್ಕೆ ಹಾಜುರುಪಡಿಸಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿ ಸಂಃ 1 ರಿಂದ 5 ಕ್ಕೆ ಸಂಬಂಧಿಸಿದ ಎಲ್ಲಾ ಖರೀದಿ ಪತ್ರಗಳು ಕಡತದಲ್ಲಿರುತ್ತವೆ ಎಂದರೆ ಸರಿ . ಸದರಿ ಕ್ರಯಪತ್ರಗಳಲ್ಲಿ ದಾವಾ ಆಸ್ತಿ ಸಂಃ 1 ರಿಂದ 5 ನ್ನು ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿ . ನಾನು ಸದರಿ ಕ್ರಯಪತ್ರಗಳನ್ನು ಪ್ರಶ್ನಿಸಿ ಯಾವುದೇ ದಾವೆಯನ್ನು ನಾನು ಸಲ್ಲಿಸಿರುವುದಿಲ್ಲ. 2007ನೇ ಇಸವಿಯಲ್ಲಿ ನನ್ನ ವಯಸ್ಸು 14-15 ವರ್ಷ ಆಗಿತ್ತು . ದಾವಾ ಆಸ್ತಿಯ 1 ರಿಂದ 5 ರ ಸ್ವತ್ತುಗಳನ್ನು ನಾನು ಅಪ್ರಾಪ್ತನಾಗಿದ್ದಾಗ ಮಾರಾಟ ಮಾಡಲಾಗಿದೆ ಎಂದರೆ ಸರಿ . ನನ್ನ ತಂದೆ ತಾಯಿ ನಮ್ಮ ಕುಟುಂಬದ ಅವಶ್ಯಕತೆಗಾಗಿ ದಾವಾ ಆಸ್ತಿ ಸಂಃ 1 ರಿಂದ 5 ನ್ನು ಮಾರಾಟ ಮಾಡಿದ್ದರಿಂದ ನಾನು ಪ್ರಾಪ್ತ ವಯಸ್ಕನಾದ ಮೇಲೆ ಯಾವುದೇ ಪ್ರಕರಣವನ್ನು ದಾಖಲು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

5. ವಾದಿಗಳಿಗೆ ನನ್ನ ತಂದೆಯ ಜೊತೆ ಒಳ್ಳೆಯ ಒಡನಾಟ ಇತ್ತು ಎಂದರೆ ಇರಬಹುದು. ವಾದಿಗಳು ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನನ್ನ ತಂದೆ ಮೃತಪಟ್ಟ 5-6 ವರ್ಷಗಳ ನಂತರ ದಾವಾ ಆಸ್ತಿಗಳಲ್ಲಿ ನಮಗೆ ಪಾಲು ನೀಡಿ ಎಂದು ನಮ್ಮನ್ನು ಕೇಳಿದ್ದರು. ಆ ಕಾಲಕ್ಕೆ ನಮ್ಮ ಕುಟುಂಬಕ್ಕೆ 6ನೇ ದಾವಾ ಆಸ್ತಿ ಮಾತ್ರ ಇತ್ತು ಎಂದರೆ ಸರಿ . ವಾದಿಗಳಿಗೆ ದಾವಾ ಆಸ್ತಿ ಸಂಃ 6 ರಲ್ಲಿ ಪಾಲು ನೀಡಲು ನೀವು ತಯಾರಾಗಿದ್ದೀರಾ ಎಂದರೆ ನಾವು ಏನು ಹೇಳಿರುವುದಿಲ್ಲ. ನಾನು ಮತ್ತು

ನನ್ನ ತಾಯಿ ನನ್ನ ಅಕ್ಕಂದಿರಾದ ವಾದಿಗಳ ಜೊತೆ ಈಗಲೂ ಸಹ ಒಡನಾಟದಿಂದ ಇರುತ್ತೇವೆ ಎಂದರೆ ಈ ದಾವೆ ಸಲ್ಲಿಸಿದ ನಂತರ ಇರುವುದಿಲ್ಲ . ಈ ದಾವೆಯನ್ನು ನಾವು ಮತ್ತು ವಾದಿಗಳು ಒಟ್ಟಿಗೆ ಚರ್ಚಿಸಿ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಗಳು ಶಾಮೀಲಾಗಿ ದಾವಾ ಆಸ್ತಿ ಸಂಃ 1 ರಿಂದ 5ನ್ನು ಖರೀದಿ ಮಾಡುವವರಿಂದ ಹೆಚ್ಚಿನ ಹಣ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

sd/-
2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.